## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್ ಎಲ್ ಬೋಜೇಗೌಡ ಇವರು ನಿಯಮ 72 ರಡಿ ನೀಡಿದ ಸೂಚನಾ ಪತ್ರಕ್ಕೆ ಉತ್ತರ.

**ವಿಷಯ:**

ಅಮೃತ್ ಮಹಲ್‌ಗೆ ಸುಮಾರು 500 ವರ್ಷಗಳ ಇತಿಹಾಸವಿದ್ದು, ಕೆಲಸಗಾರ ತಳಿ ವರ್ಗಕ್ಕೆ ಸೇರಿದವುಗಳಾಗಿವೆ. ಅಮೃತ್ ಮಹಲ್ ರಾಜ್ಯದ 7 ಜಿಲ್ಲೆಗಳಲ್ಲಿ ವಿಸ್ತಾರಗೊಂಡಿದ್ದು, ಅಂದಿನ ಮೈಸೂರು ಅರಸರು 1572 ರಿಂದ 1636 ರ ಕಾಲಘಟ್ಟದಲ್ಲಿ ಅಭಿವೃದ್ಧಿಗೊಳಿಸಿದರು. ಯುದ್ಧಗಳ ಸಂದರ್ಭದಲ್ಲಿ ಸಾಮಾನು ಸಾಗಟಕ್ಕಾಗಿ ಈ ತಳಿಯು ಅಭಿವೃದ್ಧಿಯಾಯಿತು. 1617-1704 ರಲ್ಲಿ ಆಗಿನ ಮೈಸೂರಿನ ಮಹಾರಾಜರು ಕಾಲಾನುಸಾರವಾಗಿ ಈ ಕರುಹಟ್ಟಿಗೆ ರಾಸುಗಳನ್ನು ಸೇರಿಸಿ, ಈ ರಾಸುಗಳಿಗೆ 'ಕಾವಲು' ಗಳನ್ನು ನಮ್ಮ ರಾಜ್ಯದ ವಿವಿಧ ಭಾಗದಲ್ಲಿ ನೀಡಿದರು ಎಂಬ ಮಾಹಿತಿ ನಮಗೆ ಇತಿಹಾಸದ ಮೂಲಕ ತಿಳಿದುಬರುತ್ತದೆ. 1915-16 ರಲ್ಲಿ ಅಮೃತ್ ಮಹಲ್‌ಗೆ ಮೀಸಲಿಟ್ಟ ಕಾವಲು ಪ್ರದೇಶ 3,95,062 ಎಕರೆ ಈಗ ಉಳಿದಿರುವುದು 37,069,14 ಎಕರೆ ಮಾತ್ರ. ಪ್ರತಿ ವರ್ಷ ರಾಜ್ಯ ಸರ್ಕಾರಕ್ಕೆ ಅಮೃತ್ ಮಹಲ್ ಕಾವಲು ಮತ್ತು ತಳಿಗಳ ಮಾರಾಟದಿಂದ (ಕರು) ಸುಮಾರು 1.50 ರಿಂದ 2 ಕೋಟಿ ಆದಾಯ ಬರುತ್ತಿದ್ದರೂ ಸಹ, ಸದರಿ ಕೇಂದ್ರಗಳನ್ನು ನಿರ್ಲಕ್ಷ್ಯತನಕ್ಕೆ ದೂಡಿರುವುದು ದುರದೃಷ್ಟ ವಿಷಯ. ಪ್ರಸ್ತುತ ಬಜೆಟ್‌ನಲ್ಲಿ ಅಮೃತ್ ಮಹಲ್ ಬಗ್ಗೆ ಉಲ್ಲೇಖವಿಲ್ಲದಿರುವುದು ಯೋಜನೆಗಳು ಕುಂಠಿತಗೊಂಡಿರುವುದಕ್ಕೆ ಸಾಕ್ಷಿಯಾಗಿದೆ. ಪ್ರಸ್ತುತ ಸದರಿ ಯೋಜನೆಗಳ ಪುನಃಶ್ಚೇತನ ಈ ಸಾಲಿನ ಬಜೆಟ್‌ನಲ್ಲಿ ಅನುದಾನ ನೀಡದಿರುವ ವಿಷಯದ ಕುರಿತು ಮಾನ್ಯ ಪಶುಸಂಗೋಪನೆ ಹಾಗೂ ಹಜ್ ಮತ್ತು ವಕ್ಫ್ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಅಮೃತ್ ಮಹಲ್ ಕಾವಲು ಪ್ರದೇಶದಲ್ಲಿಯೇ ಜಾನುವಾರು ಸಾಕಾಣಿಕೆಗಾಗಿ/ನಿರ್ವಹಣೆಗಾಗಿ ಪ್ರಸಕ್ತ ಸಾಲಿನ (2020-21) ಬಜೆಟ್‌ನಲ್ಲಿ ಇಲಾಖೆಯ ಯೋಜನೆಯಡಿ ರೂ.503.88 ಲಕ್ಷಗಳ ಅನುದಾನ ನಿಗಧಿಯಾಗಿದ್ದು, ಸದರಿ ಅನುದಾನವನ್ನು ಅಮೃತ್ ಮಹಲ್ ತಳಿಗಳ ಸಂವರ್ಧನೆ ಮತ್ತು ನಿರ್ವಹಣೆಗಾಗಿ ಬಳಸಿಕೊಳ್ಳಲಾಗುವುದು.

ಅಮೃತ್ ಮಹಲ್ ಉಪಕೇಂದ್ರ, ಲಿಂಗದಹಳ್ಳಿ, ಚಿಕ್ಕಮಗಳೂರು ಜಿಲ್ಲೆ ಇಲ್ಲಿಗೆ ಅಮೃತ್ ಮಹಲ್ ತಳಿ ರಾಸುಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ ಮಿಷನ್ ಯೋಜನೆಯಡಿ "ಅಮೃತ್ ಮಹಲ್ ಗೋಕುಲ ಗ್ರಾಮ" ಸ್ಥಾಪನೆ ಮಾಡಲು ರಾಸುಗಳ ಶೆಡ್ ನಿರ್ಮಾಣ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ರೂ.250.00 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಅಮೃತ್ ಮಹಲ್ ತಳಿ ಸಂವರ್ಧನಾ ಕೇಂದ್ರ, ಅಜ್ಜಂಪುರಕ್ಕೆ ಮೂರು ಹೊಸ ಉಪಕೇಂದ್ರಗಳಾದ ಬಿಳುವಾಲ, ಬಿದರೆ ಮತ್ತು ಕಾಯ್ಸೂಡು ಕೇಂದ್ರಗಳನ್ನು ಪ್ರಾರಂಭಿಸಲು ಹಾಗೂ ಅಮೃತ್ ಮಹಲ್ ತಳಿ ಸಂವರ್ಧನಾ ಉಪ ಕೇಂದ್ರಗಳಾದ ರಾಯಸಂದ್ರ, ಕಾಮಗಿರಿ ಮತ್ತು ಚಿಕ್ಕಎಮ್ಮಿಗನೂರು ಜಾನುವಾರು ಸಂವರ್ಧನಾ ಉಪ ಕೇಂದ್ರಗಳ ಪುನರುಜ್ಜೀವನಕ್ಕಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಒಟ್ಟಾರೆಯಾಗಿ ರೂ.599.99 ಲಕ್ಷಗಳ ಅನುದಾನವನ್ನು ನೀಡಲಾಗಿರುತ್ತದೆ.

**ಪಸಂಮೀ 142 ಸಲೆವಿ 2020**

ಪ್ರಭು ಬಿ. ಚವ್ಹಾಣ್
ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು